ಮಾಡತೊಡಗಿದ.

ಅಣ್ಣನಿಗೆ ದುರಾಸೆ ಹೆಚ್ಚಾಯಿತು, ಅವನು ಸಿದ್ಧ ಸಾಧಕನು ನುಡಿದ ಮಾತುಗಳನ್ನೆಲ್ಲ ಗಾಳಿಗೆ ತೂರಿದ. ಅವನಿಗೆ ದುರಹಂಕಾರ ಬಂತು. ಬಡವರನ್ನು ಕಡೆಗಣಿಸಿ ಅನ್ಯಾಯವನ್ನು ಮಾಡತೊಡಗಿದ. ಅಣ್ಣನ ಸುದ್ದಿಯು ರಾಜನ ಕಿವಿಯನ್ನೂ ತಲುಪಿತು. ಅವನಲ್ಲಿ ಅಪೂರ್ವವಾದ ವಸ್ತು ಇರುವುದಾಗಿ ರಾಜನಿಗೆ ತಿಳಿಯಿತು. ರಾಜನು ಅಣ್ಣನನ್ನು ಅರಮನೆಗೆ ಕರೆಸಿಕೊಂಡ.

‘ಏನೋಯ್! ನೀನು ಅಂಗೈಯಲ್ಲಿ ಅರಮನೆಯನ್ನು ತೋರಿಸಿ ಬಣ್ಣ ಬಣ್ಣದ ಮಾತುಗಳಾಡಿ ಜನರನ್ನು ಮರುಳು ಮಾಡುತ್ತಿರುವುದಾಗಿ ನಮಗೆ ಸುದ್ದಿ ಬಂದಿದೆ. ಇದರಲ್ಲೇನೋ ರಹಸ್ಯವಿರುವಂತಿದೆ. ನಿಜ ಹೇಳಿಬಿಡು’ ಎಂದು ಮಹಾಮಂತ್ರಿ ಜೋರುಧ್ವನಿಯಲ್ಲಿ ಕೇಳಿದ. ಅದನ್ನು ಕೇಳಿ ಅಣ್ಣನಿಗೆ ಸಿಟ್ಟು ಬಂತು, ಅವನು ತಾನು ರಾಜನ ಆಸ್ಥಾನದಲ್ಲಿ ಇರುವುದನ್ನು ಮರೆತು ‘ನನ್ನ ಮೇಲೆ ನೀವು ಅನುಮಾನ ಪಡುತ್ತೀರೇನು? ನಾನು ಈ ಅಪೂರ್ವವಾದ ಅರಮನೆಯನ್ನು ಸಿದ್ಧ ಸಾಧಕರಿಂದ ಪಡೆದಿದ್ದೇನೆ. ಇದರ ಬಗ್ಗೆ ಹಗುರಾಗಿ ಮಾತನಾಡಬೇಡಿ ತಿಳಿಯಿತೆ?’ ಎಂದು ನುಡಿದ.

‘ಹಾಗಾದರೆ ಈ ಗೊಂಬೆ ಅರಮನೆಯ ಪರೀಕ್ಷೆ ನಡೆಯಲಿ. ಇವನು ಪರೀಕ್ಷೆಯಲ್ಲಿ ಜಯಶಾಲಿಯಾದರೆ ಇವನನ್ನು ಘನವಾಗಿ ಸತ್ಕಾರ ಮಾಡೋಣ. ಈ ಅಂಗೈಯಲ್ಲಿ ಅರಮನೆಯು ಸುಳ್ಳಾದರೆ ಇವನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು, ಇವನನ್ನು ರಾಜ್ಯದಿಂದಲೇ ಓಡಿಸಿಬಿಡೋಣ’ ಎಂದು ಮಹಾ ಮಂತ್ರಿಯು ಕಠಿಣವಾಗಿ ನುಡಿದ. ರಾಜನು ಮಂತ್ರಿಯ ಮಾತಿಗೆ ಅಸ್ತು ಎಂದನು. ಅಣ್ಣನೂ ಪರೀಕ್ಷೆಗೆ ಒಪ್ಪಿಕೊಂಡ.

ಅಣ್ಣನಿಗೆ ತನ್ನ ಮಾತು ಗೆಲ್ಲುವ ಭರವಸೆ ಇತ್ತು ಅವನು ತಾನೇ ಅರಮನೆಯ ಒಳಗೆ ಚಿಕ್ಕಗಾತ್ರದಲ್ಲಿ ಹೋಗಿ ರಾಜನನ್ನು ಆಶ್ಚರ್ಯಗೊಳಿಸಲು ನಿರ್ಧರಿಸಿದ. ಅವನು ಅಂಗೈಯಲ್ಲಿ ಅರಮನೆಯನ್ನು ಇಟ್ಟುಕೊಂಡು ಅದನ್ನು ಮುಟ್ಟಿದ. ಅವನ ಗಾತ್ರ ಕುಗ್ಗಲೇ ಇಲ್ಲ. ಗೊಂಬೆ ಅರಮನೆಯು ಹಾಗೇ ಇತ್ತು! ಅಣ್ಣನು ಗಾಬರಿಗೊಂಡು ಅಂಗೈಯಲ್ಲಿ ಅರಮನೆಯನ್ನು ಮತ್ತೆ ಮತ್ತೆ ಮುಟ್ಟಿದ. ಏನೂ ಆಗಲಿಲ್ಲ! ತಾನು ಸಿದ್ಧ ಸಾಧಕನ ಮಾತನ್ನು ಮೀರಿ, ಅವನ ಹೆಸರನ್ನು ಬಹಿರಂಗ ಗೊಳಿಸಿದ್ದಲ್ಲದೆ ಜನರಿಗೆ ಅನ್ಯಾಯ ಮಾಡಿ ಹಣ ಗಳಿಸಿದ್ದಕ್ಕೆ ಹೀಗಾಗಿದೆ ಎಂದು ಅಣ್ಣನಿಗೆ ಗೊತ್ತಾಯಿತು.

ಇದೆಲ್ಲವನ್ನು ಗಮನಿಸುತ್ತಿದ್ದ ಮಹಾ ಮಂತ್ರಿಯು ‘ಮಹಾರಾಜ! ಇವನೊಬ್ಬ ಮೋಸಗಾರ. ಅಂಗೈಯಲ್ಲಿ ಅರಮನೆಯನ್ನು ತೋರಿಸಲು ಸಾಧ್ಯವೆ? ಇವನು ತನ್ನ ಬಣ್ಣ ಬಣ್ಣದ ಮಾತುಗಳಿಂದ ಪ್ರಜೆಗಳಿಗೆ ಅಂಗೈಯಲ್ಲಿ ಅರಮನೆ ತೋರಿಸುವುದಾಗಿ ಹೇಳಿ ವಂಚನೆ ಮಾಡಿದ್ದಾನೆ. ಇವನನ್ನು ನಗರದಿಂದ ಗಡೀಪಾರು ಮಾಡಿಬಿಡಿ. ಈತನ ಆಸ್ತಿಯು ರಾಜ ಭಂಡಾರಕ್ಕೆ ಸೇರಲಿ’ ಎಂದು ಕಠಿಣವಾಗಿ ಆಜ್ಞೆ ಮಾಡಿದ. ಅಣ್ಣನು ಅದುವರೆಗೆ ಗಳಿಸಿದ ಆಸ್ತಿಯೆಲ್ಲ ರಾಜನಿಗೆ ಸೇರಿತು. ರಾಜಭಟರು ಅಣ್ಣನನ್ನು ನಗರದಿಂದ ಹೊರಗೆ ಓಡಿಸಿದರು.

ಅಣ್ಣನಿಗೆ ಎತ್ತ ಹೋಗಬೇಕೋ, ಏನು ಮಾಡಬೇಕೋ ತಿಳಿಯದಾಯಿತು. ಅವನಿಗೆ ತಾನು ಹುಟ್ಟೂರನ್ನು ಬಿಟ್ಟು ಹೋದುದೇ ತಪ್ಪೆಂದು ಈಗ ಅರಿವಾಯಿತು. ಅವನು ತನ್ನ ಊರಿಗೆ ಮರಳಿ ಹೋದನು. ಅಲ್ಲಿ ತನ್ನ ತಮ್ಮನಿಗೆ ನಡೆದುದೆಲ್ಲವನ್ನೂ ಹೇಳಿಕೊಂಡ. ಅದಕ್ಕೆ ತಮ್ಮನು ‘ಅಣ್ಣಯ್ಯ! ಈಗಾಗಲೇ ನಡೆದುದನ್ನು ಮರೆತು ಬಾಳೋಣ. ಈ ಅಂಗೈಯಲ್ಲಿ ಅರಮನೆಯು ನಿನಗೊಂದು ಗುಣಪಾಠವಾಗಲಿ. ನಾವು ನಮ್ಮ ಶ್ರಮದ ದುಡಿಮೆಯಲ್ಲಿ ಬಂದುದರಲ್ಲಿ ತೃಪ್ತಿಯಿಂದ ಒಟ್ಟಿಗೆ ಇಲ್ಲಿಯೇ ಬಾಳೋಣ’ ಎಂದು ಹೇಳಿದ. ಅದಕ್ಕೆ ಅಣ್ಣನು ತನ್ನ ಒಪ್ಪಿಗೆ ಸೂಚಿಸಿದ. ಆ ಮೇಲೆ ಅವನೆಂದೂ ಸುಖದ ಸುಪ್ಪತ್ತಿಗೆಯಲ್ಲಿ ಮೆರೆಯುವ ಆಸೆ ತೋರಿಸಲಿಲ್ಲ. ಅಣ್ಣ ತಮ್ಮಂದಿರು ಒಟ್ಟಿಗೆ ಬಾಳುವೆ ಮಾಡುತ್ತ ಬಹಳ ಕಾಲ ಸುಖವಾಗಿದ್ದರು.

ಈ ಕತೆಯೇ ಮುಂದೆ ‘ಅಂಗೈಯಲ್ಲಿ ಅರಮನೆ’ ಎಂಬ ಪದ ನುಡಿಯಾಯಿತು. ಬಣ್ಣ ಬಣ್ಣದ ಮಾತುಗಳಿಂದ ಜನರನ್ನು ನಂಬಿಸಿ ಮೋಸ ಮಾಡುವವರನ್ನು ‘ಅಂಗೈಯಲ್ಲಿ ಅರಮನೆ’ ತೋರಿಸುವವರೆಂದು ಹೇಳುವುದು ಇಂದಿಗೂ ರೂಢಿಯಲ್ಲಿದ್ದು ಜನಪ್ರಿಯವಾಗಿದೆ.

(ಮಲೆನಾಡಿನ ಜಾನಪದ ಕತೆ)

**– ಶಿವಮೊಗ್ಗ ಗೀತಾಶಾಸ್ತ್ರಿ, ಬೆಂಗಳೂರು**

**ಕತೆ ಹೇಳಿದವರು: ದಿ. ಶಾರದಮ್ಮ, ಕೊಪ್ಪ**



# ಹೂ ಮನದ ಹುಡುಗಿ

ಹೂವನು ಮಾರುತ ಬಂದಳು ಹುಡುಗಿ
ಹೂವಿನ ಗುಣವನು ಹೊತ್ತವಳು
ಅವರಿವರೆನ್ನದೆ ಮನೆಮನೆಗೋಗಿ
ಮನಕೆ ಹತ್ತಿರವಾದವಳು

ಅಳತೆಯು ಪಕ್ಕ ಲೆಕ್ಕವು ಚೊಕ್ಕ
ಬನ್ನಿರಿ ಕೊಳ್ಳಿರಿ ಎನುತಿಹಳು
ಮಳೆಗೆ ಬಿಸಿಲಿಗೆ ಜಗ್ಗದ ನಡಿಗೆ
ಬೀರುತ ನಡೆದಳು ಹೂವಿನ ನಗೆ

ಹಬ್ಬ ಹರಿದಿನ ಮದುವೆ ಮುಂಜಿ
ಕೊಳ್ಳಿರಿ ಹೂವನು ಎನುತಿಹಳು
ಹೂವಿನ ಮುಗ್ಧ ಕಣ್ಣವಳು
ಬುಟ್ಟಿಯನಿಳಿಸಿ ಹೂವನು ಕೊಟ್ಟವಳು

ಸಕಾಲವು ಕರಗಲು ಕಾಯಕ ಮುಗಿಯಲು
ಶಾಲೆಗೆ ಹೆಜ್ಜೆಯ ಹಾಕಿದಳು
ಓದುತ ಬರೆಯುತ ವಿದ್ಯೆಯ ಕಲಿಯುತ
ಹೂ ಬದುಕಿಗೆ ಹೆಜ್ಜೆಯಿಟ್ಟವಳು

**–ಸುಶೀಲಾ ಸೋಮಶೇಖರ್ ಹಾಸನ**